**ಸಾಕ್ಷಿಯನ್ನು ದಿನಾಂಕಃ 23.01.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಸ್.ಎಲ್.ಕೆ, ವಕೀಲರಿಂದಃ**

ನಾನು ಪ್ರಸ್ತುತ ನಂಜನಗೂಡಿನ ಶ್ರೀರಾಂಪುರದಲ್ಲಿ ವಾಸವಿದ್ದೇನೆ. ನಾನು ಹುಟ್ಟಿದಾಗಿನಿಂದಲೂ ಶ್ರೀರಾಂಪುರದಲ್ಲಿ ವಾಸವಿದ್ದೇನೆ. 1 ನೇ ಪ್ರತಿವಾದಿ ನನ್ನ ಅತ್ತೆಯ ಮಗ ಮತ್ತು ಇವರು ಕೂಡ ನಮ್ಮ ಮನೆಯ ಪಕ್ಕದಲ್ಲಿ ವಾಸವಿರುತ್ತಾರೆ. ಚೆಲುವಮ್ಮ ಮತ್ತು ಕರಿಯಯ್ಯ ಸಹೋದರ-ಸಹೋದರಿಯಾಗಿರುತ್ತಾರೆ ಎಂದು ತೋರಿಸಲು ಪಹಣಿ ಪತ್ರಗಳು, ಅಸೆಸ್ ಮೆಂಟನ್ನು ಹಾಜರುಪಡಿಸಿದ್ದೇನೆ. ಚೆಲುವಮ್ಮ ಮತ್ತು ಕರಿಯಯ್ಯರವರು ಮಿಣಕಮ್ಮ ಮತ್ತು ಚೆಲುವಯ್ಯ ರವರ ಮಕ್ಕಳಾಗಿರುತ್ತಾರೆ ಎಂದು ತೋರಿಸಲು ಕಂದಾಯ ಇಲಾಖೆಯಿಂದ ನೀಡಿರುವ ಜೀವಂತ ಸದಸ್ಯರ ದೃಡೀಕರಣ ಪತ್ರವನ್ನು ಹಾಜರುಪಡಿಸಿಲ್ಲ. ದಾವಾ ಸ್ವತ್ತುಗಳು ನನ್ನ ತಾತ ಚೆಲುವಯ್ಯರವರ ಹೆಸರಿನಲ್ಲಿದ್ದವು. ದಾವಾ ಸ್ವತ್ತುಗಳು ನನ್ನ ತಾತನ ಹೆಸರಿನಲ್ಲಿರುತ್ತವೆ ಎಂದು ತೋರಿಸಲು ಪಹಣಿ ಪತ್ರಿಕೆಗಳು ಮತ್ತು ಅಸೆಸ್ ಮೆಂಟನ್ನು ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ 1 ನೇ ಪ್ರತಿವಾದಿಯ ಹೆಸರು ದಾಖಲಾಗಿರುತ್ತದೆ ಎಂದರೆ ಅವರು ಅಕ್ರಮವಾಗಿ ಮಾಡಿಕೊಂಡಿರುತ್ತಾರೆ. ನಮಗು ಮತ್ತು 1 ನೇ ಪ್ರತಿವಾದಿಯ ಕುಟುಂಬಕ್ಕೂ ಯಾವುದೇ ಸಂಬಂಧ ಇರುವುದಿಲ್ಲವೆಂದರೆ ಸರಿಯಲ್ಲ. ನಾವು ವಾಸ ಇರುತ್ತೇವೆ ಎಂದು ಹೇಳುವ ಮನೆ ನಂ. 4006, 3 ನೇ ಅಡ್ಡರಸ್ತೆ, ಶ್ರೀರಾಂಪುರ ಈ ವಿಳಾಸವಿರುವ ಮನೆಯು ಕೂಡ 1 ನೇ ಪ್ರತಿವಾದಿಗೆ ಸೇರಿದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ನಾವು ವಾಸವಿರುತ್ತೇವೆ ಎಂದು ಹೇಳುವ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನಮಗು ಮತ್ತು 1 ನೇ ಪ್ರತಿವಾದಿಯ ಕುಟುಂಬಕ್ಕೂ ಯಾವುದೇ ಸಂಬಂಧವಿಲ್ಲದಿದ್ದರೂ 1 ನೇ ಪ್ರತಿವಾದಿಯಿಂದ ಅಕ್ರಮ ಲಾಭ

ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮಲ್ಲಿಗಮ್ಮ ಮತ್ತು ಭಾಗ್ಯ ಎಂಬುವವರು ಈಗಾಗಲೇ ಮೂಲ ದಾವೆ ಸಂಖ್ಯೆ 136/2006 ರಂತೆ ವಿಭಾಗ ಕೋರಿ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯೂ ಕೂಡ 1 ನೇ ಪ್ರತಿವಾದಿಯ ವಿರುದ್ಧ ದಾವಾ ಸ್ವತ್ತುಗಳಲ್ಲಿ ಹಿಸ್ಸೆ ಕೋರಿ ಮೂಲ ದಾವೆ ಸಂಖ್ಯೆ 184/2017 ರಂತೆ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದುದ, ವಿಚಾರಣೆಗಾಗಿ ಬಾಕಿಯಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಇತರೆ ವಾದಿಗಳು 1 ನೇ ಪ್ರತಿವಾದಿಯ ಕುಟುಂಬಕ್ಕೆ ಸೇರಿದವರಲ್ಲವಾದ್ದರಿಂದ ಮೂಲ ದಾವೆ ಸಂಖ್ಯೆ 184/2017 ರಲ್ಲಿ ನಮ್ಮನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಮೂಲತಃ 1 ನೇ ಪ್ರತಿವಾದಿಯ ತಾಯಿ ಚೆಲುವಮ್ಮ ಸೇರಿದ ಆಸ್ತಿಗಳಾಗಿದ್ದು, ಅವರ ಮರಣಾನಂತರ ಪೌತಿ ಮೇರೆಗೆ 1 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಅವುಗಳು ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. 1 ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಖಾತೆಯನ್ನು ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿರುತ್ತೀರಾ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು 1 ನೇ ಪ್ರತಿವಾದಿಯ ತಾಯಿಯ ಮನೆಯಲ್ಲಿ ಮನೆ ಕೆಲಸ ಮಾಡಿಕೊಂಡಿದ್ದು, ಆ ಕಾರಣಕ್ಕಾಗಿ ವಾಸ ಮಾಡಲು ನನ್ನ ತಂದೆಗೆ ಮನೆಯಲ್ಲಿ ಅನುಮತಿ ನೀಡಿದ್ದು, ನಂತರ ಅದನ್ನು ದುರುಪಯೋಗಪಡಿಸಿಕೊಂಡು ನಮಗು ಭಾಗ ಬರಬೇಕೆಂದು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ಇತರೆ ವಾದಿಗಳು ಚೆಲುವಮ್ಮರವರ ಕುಟುಂಬಕ್ಕೆ ಸೇರಿದವರಲ್ಲವಾದ್ದರಿಂದ ದಾವಾ ಸ್ವತ್ತುಗಳಲ್ಲಿ ಭಾಗ ಕೇಳಲು ಹಕ್ಕು, ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**